**ಚಾಸಾಃ 46 ಪ್ರಾಸಾಃ 31**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 2/2022**

ಹೆಸರು :ನೇತ್ರಾವತಿ

ಗಂಡನ ಹೆಸರು :ಚಂದ್ರಶೇಖರ್

ಪ್ರಾಯ :42 ವರ್ಷ

ಉದ್ಯೋಗ :ಗುಮಾಸ್ತರು ಮತ್ತು ಡಾಟಾ ಎಂಟ್ರಿ ಸಹಾಯಕರು, ಮರ್ಕಂಜ ಗ್ರಾಮ ಪಂಚಾಯತ್

ವಾಸ : ಮರ್ಕಂಜ ಗ್ರಾಮ, ಸುಳ್ಯ ತಾಲೂಕು

**ದಿನಾಂಕ 12.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2009 ರಿಂದ 2014ರ ವರೆಗೆ ಮರ್ಕಂಜ ಗ್ರಾಮ ಪಂಚಾಯತಿಯಲ್ಲಿ ಡಾಟಾ ಎಂಟ್ರಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದೆ. 2014 ರಿಂದ ಗುಮಾಸ್ತರು ಮತ್ತು ಡಾಟಾ ಎಂಟ್ರಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 19.1.2015 ರಂದು ನಾನು ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದಾಗ ಪೊಲೀಸರು ನಮ್ಮ ಪಂಚಾಯಿತಿಗೆ ಬಂದು 2005-06 ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳ ಅರ್ಜಿಗಳು, ಫಲಾನುಭವಿಗಳ ಕಡತಗಳು ಮತ್ತು ದಾಖಲೆಗಳನ್ನು ಹಾಜರು ಪಡಿಸುವಂತೆ ಚಾಸಾ-44 ರವರಿಗೆ ಕೇಳಿದ್ದು, ಅದರಂತೆ ಸದರಿ ಯೋಜನೆಗೆ ಸಂಬಂಧಪಟ್ಟ 15 ಫೈಲುಗಳು, 2003 ರಿಂದ 2005 ರವರೆಗೆ ಸದರಿ ಯೋಜನೆಯ ಹಣ ಸಂದಾಯದ ವಹಿಗಳನ್ನು ಹಾಜರು ಪಡಿಸಿದ್ದು

ಅವುಗಳನ್ನು ಪೊಲೀಸರು ನನ್ನ ಮತ್ತು ಚಾಸಾ-44 ರವರ ಸಮಕ್ಷಮ ಅಮಾನತು ಪಡಿಸಿಕೊಂಡು ಈ ಬಗ್ಗೆ 11 ರಿಂದ 12 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ 71 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು 71(ಬಿ) ಎಂದು ಗುರುತಿಸಲಾಯಿತು.

ಆ ದಿನ ಅಮಾನತು ಪಡಿಸಿಕೊಂಡ 15 ಫೈಲುಗಳು ಮತ್ತು ಫಲಾನುಭವಿಗಳಿಗೆ ಸಂದಾಯವಾದ ಮೊತ್ತದ ವಹಿಗಳನ್ನು ನೋಡುತ್ತಿದ್ದು ಅವುಗಳನ್ನು ಮೂಲ ಸಿಸಿ ನಂಃ 348/2015 ರಲ್ಲಿ ಈಗಾಗಲೇ 143 ರಿಂದ 157 ಎಂದು ಗುರುತಿಸಲಾಗಿದೆ.

ಅದೇ ದಿನ 2007-08 ರ ಇಂದಿರಾ ಆವಾಜ್ ವಸತಿ ಯೋಜನೆಯ ಫಲಾನುಭವಿಗಳ ವೈಯಕ್ತಿಕ ಕಡತಗಳು, ಫಲಾನುಭವಿಗಳು ನೀಡಿದ ಅರ್ಜಿ ಮತ್ತು ಮೂಲ ದಾಖಲೆಗಳನ್ನು ಹಾಜರು ಪಡಿಸುವಂತೆ ಕೇಳಿದ್ದು ಅದರಂತೆ ಸದರಿ ಯೋಜನೆಯ ಸುಮಾರು 20 ಕಡತಗಳನ್ನು ಚಾಸಾ-44 ರವರು ಹಾಜರು ಪಡಿಸಿದ್ದು ಅವುಗಳನ್ನು ಪೊಲೀಸರು ನನ್ನ ಮತ್ತು ಚಾಸಾ-44 ರವರ ಸಮಕ್ಷಮ ಹಾಜರು ಪಡಿಸಿದ್ದು, ಸದರಿ ದಾಖಲೆಗಳನ್ನು ಪೋಲೀಸರು ಅಮಾನತು ಪಡಿಸಿಕೊಂಡು ಈ ಬಗ್ಗೆ 12 ರಿಂದ 1 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ 72 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು 72(ಬಿ) ಎಂದು ಗುರುತಿಸಲಾಯಿತು. ಆ ದಿನ ಅಮಾನತು ಪಡಿಸಿಕೊಂಡ 2007-08 ನೇ ಸಾಲಿನ ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳ 20 ಕಡತಗಳನ್ನು ನೋಡುತ್ತಿದ್ದು ಅವುಗಳನ್ನು ಮೂಲ ಸಿಸಿ ನಂಃ 348/2015 ರಲ್ಲಿ ಈಗಾಗಲೇ 159 ರಿಂದ 178 ಎಂದು ಗುರುತಿಸಲಾಗಿದೆ.

ಅದೇ ದಿನ 2008-09 ರ ಇಂದಿರಾ ಆವಾಜ್ ಯೋಜನೆಯ ವೈಯಕ್ತಿಕ ಕಡತಗಳು, ಫಲಾನುಭವಿಗಳು ನೀಡಿದ ಅರ್ಜಿ ಮತ್ತು ಮೂಲ ದಾಖಲೆಗಳನ್ನು ಹಾಜರು ಪಡಿಸುವಂತೆ ಕೇಳಿದ್ದು ಅದರಂತೆ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಒಟ್ಟು 27 ಕಡತಗಳನ್ನು ಚಾಸಾ-44 ರವರು ಹಾಜರು ಪಡಿಸಿದ್ದು, ಅವುಗಳನ್ನು ಪೊಲೀಸರು

ಅಮಾನತು ಪಡಿಸಿಕೊಂಡು ಮದ್ಯಾಹ್ನ 1 ರಿಂದ 2 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-73 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-73(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನೋಡುತ್ತಿದ್ದು ಅವುಗಳನ್ನು ಮೂಲ ಸಿಸಿ ನಂಃ 348/2015 ರಲ್ಲಿ ಈಗಾಗಲೇ 180 ರಿಂದ 206 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ನಾನು 2009ರಲ್ಲಿ ಮರ್ಕಂಜ ಗ್ರಾಮ ಪಂಚಾಯಿಯಲ್ಲಿ ಡಾಟಾ ಎಂಟ್ರಿ ಆಪರೇಟರಾಗಿ ಕೆಲಸಕ್ಕೆ ಸೇರಿರುತ್ತೇನೆ. 2009ರ ನಂತರ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಪ್ರೇಮ್ ಸಿಂಗ್, ನಂತರ ಸುಂದರ ಪೂಜಾರಿ, ನಂತರ ವಿದ್ಯಾಧರ್ ರವರು ಕಾರ್ಯದರ್ಶಿಗಳಾಗಿ ಕೆಲಸ ಮಾಡಿರುತ್ತಾರೆ. ಮೇಲಿನ ದಾಖಲೆಗಳನ್ನು ಪ್ರಕರಣ ದಾಖಲಾದ ನಂತರ ಪೋಲೀಸರು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿದ್ದರು. ನಂತರ ಸದರಿ ದಾಖಲೆಗಳು ಪೊಲೀಸ್ ಠಾಣೆಯಲ್ಲಿತ್ತು ಎಂದರೆ ಸರಿ. ನಾನು ಮೇಲೆ ಹೇಳಿದಂತೆ ಪಂಚನಾಮೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಕೂಡ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದು ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಮರ್ಕಂಜ ಪಂಚಾಯಿತಿಯಲ್ಲಿ ಯಾವುದೇ ಪಂಚನಾಮೆ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ